ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ವಿಶ್ವ ಬ್ಯಾಂಕಿನಿಂದ ನೆರವು

1617 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನನಕಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ನೀರಾವರಿ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ವತಿಯಿಂದ ಬಂದಿರುವ ಹಣವೆಷ್ಟು? (ಸಾಲದ ರೂಪದಲ್ಲಿ)

ಆ) ವಿವಿಧ ಕಾಮಗಾರಿಗಳಿಗೆ (ಪ್ರಾಜೆಕ್ಟ್) ಬಂದಿರುವ ಹಣ ಎಷ್ಟು?

ಇ) ಇತ್ತೀಚೆಗೆ ಕೆಲವು ಯೋಜನೆಗಳಿಗೆ ವಿಶ್ವ ಬ್ಯಾಂಕಿನ ಸಾಲ ನಿಂತಿರುವುದು ನಿಜವೇ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ರಾಜ್ಯ ಸಾಲ್ಕು ನೀರಾವರಿ ಯೋಜನೆಗಳಿಗೆ ವಿಶ್ವ ಬ್ಯಾಂಕ್‌ನಿಂದ ದೊರೆತಿರುವ ಸಾಲದ ಮೊತ್ತ 522.13 ಮಿಲಿಯನ್ ಡಾಲರ್‌ಗಳು.

ಆ) ವಿವಿಧ ಯೋಜನೆಗಳಿಗೆ ವಿಶ್ವ ಬ್ಯಾಂಕ್‌ನವರಲ್ಲಿ ಮರು ಪಾವತಿಗಾಗಿ ಬೇಡಿಕೆ ಸಲ್ಲಿಸಿದ ಮೊತ್ತ ಈ ರೀತಿ ಇದೆ.

i)	ಕರ್ನಾಟಕ ನೀರಾವರಿ ಯೋಜನೆ (ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಮೊದಲ ಹಂತ)	117.64 ಮಿಲಿಯನ್ ಡಾಲರುಗಳು. (ಪೂರ್ಣ ಬಂದಿದೆ)
ii)	ಕರ್ನಾಟಕ ಕೆರೆ ನೀರಾವರಿ ಯೋಜನೆ	54.00 ಮಿಲಿಯನ್ ಡಾಲರುಗಳು (ಪೂರ್ಣ ಬಂದಿದೆ)
iii)	ರಾಷ್ಟ್ರೀಯ ಜಲ ನಿರ್ವಹಣ ಯೋಜನೆ	14.14ಕೋಟಿ ರೂ.ಗಳು. (15.2.1991ರ • ವರೆಗೆ)
iv)	ಕೃಷ್ಣಾ ಮೇಲ್ದಂಡೆ ಯೋಜನೆ (ಮೊದಲ ಘಟ್ಟದ ಎರಡನೇ ಹಂತ)	22.05 ಕೋಟಿ ರೂ.ಗಳು. (1991ರ ಫೆಬ್ರವರಿ ಅಂತ್ಯದವರೆಗೆ)

ಇ) ಕರ್ನಾಟಕ ನೀರಾವರಿ ಯೋಜನೆ (ಕೃಷ್ಣಾ ಮೇಲ್ದಂಡೆ ಯೋಜನೆ ಮೊದಲ ಘಟ್ಟದ ಮೊದಲ ಹಂತ) ಮತ್ತು ಕರ್ನಾಟಕ ಕೆರೆ ನೀರಾವರಿ ಯೋಜನೆ, ಈ ಯೋಜನೆಗಳು ಪೂರ್ಣಗೊಂಡಿದ್ದು ವಿಶ್ವ ಬ್ಯಾಂಕ್ ನಿಂದ ಸಾಲದ ಮೊತ್ತವನ್ನು ಪೂರ್ಣ ಪಡೆಯಲಾಗಿದೆ. ರಾಷ್ಟ್ರೀಯ ಜಲ ನಿರ್ವಹಣ ಯೋಜನೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಘಟ್ಟದ ಎರಡನೇ ಹಂತ, ಇವುಗಳು ಪ್ರಗತಿಯಲ್ಲಿ ಇದ್ದು, ವಿಶ್ವ ಬ್ಯಾಂಕಿನ ಧನ ಸಹಾಯ ದೊರೆಯುತ್ತಿದೆ.

ಈ) ಉದ್ಭವಿಸುವುದಿಲ್ಲ.

ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಸಮಿತಿ.

1623-ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ) : ಮಾನ್ಯ ಸಣ್ಣ ಕೈಗಾರಿಕೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?